ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ ಚನ್ನಗಿರಿ .

ಸಿಸಿ ನಂ. **1028/2025**

ಹೆಸರುಃ ರವಿ ನಾಯ್ಕ ಸಿ ಚಾಸಾಃ 3

ತಂದೆಃ ಚಂದ್ರನಾಯ್ಕ ಪ್ರಾಸಾಃ 2

ವಯಸ್ಸುಃ 53 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಯಲ್ಲೋದಹಳ್ಳಿ

ಸಾಕ್ಷಿಗೆ ದಿನಾಂಕಃ 04.09.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಸಅ ರವರಿಂದಃ**

ನಾನು ಸುಮಾರು ವರ್ಷಗಳ ಹಿಂದೆ ಕೆಲಸದ ನಿಮಿತ್ತ ಠಾಣೆಗೆ ಹೋದಾಗ ಒಂದು ದಾಖಲೆಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಯ ಸ್ಥಳ ಮತ್ತು ಅಮಾನತ್ತು ಪಂಚನಾಮೆಯ ಮೇಲಿರುವ ಸಹಿಯನ್ನು ಗುರುತಿಸಿದ್ದು, ಅದನ್ನು ನಿಶಾನೆ ಪಿ 1 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಸಂಗತಿಗಳು ನನಗೆ ಗೊತ್ತಿಲ್ಲ. ಮಹಜರ್ ಕಾಲಕ್ಕೆ ಮೂರು ಬಾವಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಬಾವಚಿತ್ರವನ್ನು ನಿಪಿ 2 ರಿಂದ 4 ಎಂದು ಈಗಾಗಲೇ ಗುರುತಿಸಲಾಗಿದೆ. ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನ್ನ ಜೊತೆ ಯಾರು ಸಹಿ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಮಹಜರ್ ಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಸಸಅ ರವರಿಂದ -**

ದಿಃ 26.09.2024 ರಂದು ಕಂಚುಗಾರನಹಳ್ಳಿ ಗ್ರಾಮದ ಬಸ್ ನಿಲ್ದಾಣದ ಬಳಿ ಚಾಸಾ 1 ರವರು ನನ್ನನ್ನು ಕರೆದು ಪಂಚರಾಗಿ ಸಹಕರಿಸಲು ಕೇಳಿಕೊಂಡ ಮೇರೆಗೆ ನಾವು ಅದಕ್ಕೆ

ಒಪ್ಪಿ ಕಂಚು ಗಾರನಹಳ್ಳಿ ಕ್ರಾಸ್ ಬಸ್ ನಿಲ್ದಾಣದ ಬಳಿ ಬಂದಾಗ ಬಸ್ ನಿಲ್ದಾದಲ್ಲಿ ಒಬ್ಬ ವ್ಯಕ್ತಿ ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲವನ್ನು ಕೈಯಲ್ಲಿ ಹಿಡಿದು ಕೊಂಡು ನಿಂತಿದ್ದು ಅದನ್ನು ಚಾಸಾ 1 ನಮಗೆ ತೋರಿಸಿ ದಾಳಿ ಮಾಡಲಾಗಿ ಆತನ ಹೆಸರು ಕೇಳಲಾಗಿ ಉಮೇಶ ಬಿನ್ ರಾಮನಾಯ್ಕ ಎಂದು ತಿಳಿಸಿದ್ದು, ಆತನ ಬಳಿ ಇದ್ದ ಚೀಲವನ್ನು ಪರಿಶೀಲಿಸಲಾಗಿ ಹೈವರ್ಡ್ಸ್ ವಿಸ್ಕಿಯ 90 ಎಂ ಎಲ್ ನ  96 ಟೆಟ್ರಾ ಪ್ಯಾಕ್ ಗಳು ಕಂಡು ಬಂದಿದ್ದು ಸದರಿ ವಸ್ತುಗಳನ್ನು ನಮ್ಮ ಸಮಕ್ಷಮ ಸಂಜೆ 7.00 ರಿಂದ 8.15 ರವರೆಗೆ ಮಹಜರ್ ಜರುಗಿಸಿ ನಮ್ಮ ಸಮಕ್ಷಮ ರಾಸಾನಿಯಕ ಪರೀಕ್ಷೆಗಾಗಿ ಮುಮಾಗಳನ್ನು ಪ್ರತ್ಯೆಕವಾಗಿ ತೆಗೆದು ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.  ಈ ಕುರಿತಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಪಿ 6** ಎಂದು ಗುರುತಿಸಲಾಯಿತು. ನಾನು ನಿಪಿ 1 ರ ಕಾಲಕ್ಕೆ ಹಾಜರಿದ್ದು ನಿಪಿ 6 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು -  ಆರೋಪಿತರ  ಪರ ವಕೀಲರಿಂದ – ಇರುವುದಿಲ್ಲ**

**ಮರು ವಿಚಾರಣೆ  ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ   ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**